ಅಸಲು ದಾವಾ 136/2024 ಪಿ ಡಬ್ಲ್ಯೂ - 1 - ಹರೀಶ್ ಕುಮಾರ್ ಎಂ

**ಸಾಕ್ಷಿಯನ್ನು ದಿನಾಂಕಃ 23.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಂ ಜೆ ಎಸ್ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಮತ್ತು ಸಂಗತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ.

| ಕ್ರಮ ಸಂಖ್ಯೆ : | ದಾಖಲೆಗಳು |
|---|---|
| 1 | : ಸರ್ವೆ ನಂಬರ್ 98/1 ರ 2024-25 ರ ಪಹಣಿ ಪತ್ರಿಕೆ |
| 2 | : ಸರ್ವೆ ನಂಬರ್ 98/1 ರ 2019-20 ರ ಪಹಣಿ ಪತ್ರಿಕೆ |
| 3 | : ದಿಃ22.06.2021 ರ ಕ್ರಯ ಕರಾರು ಪತ್ರ |
| 4 | : ಪ್ರತಿವಾದಿಯರಿಗೆ ದಿಃ 06.06.2022 ರಂದು ಕಳುಹಿಸಿದ ನೋಟೀಸ್ ನ ಕಛೇರಿ ಪ್ರತಿ |
| 5 | : ಅಂಚೆ ರಶೀದಿಗಳು -3 |
| 6 | : ಜಾರಿಯಾಗದೇ ಹಿಂದಿರುಗಿ ಬಂದ ಅಂಚೆ ಲಕೋಟೆಗಳು -2 |
| 7 | : ಅಂಚೆ ಸ್ವೀಕೃತಿ ಪತ್ರ |
| 8 | : ಪ್ರತಿವಾದಿಯರಿಗೆ ದಿಃ 03.08.2024 ರಂದು ಕಳುಹಿಸಿದ ನೋಟೀಸ್ ನ ಕಛೇರಿ ಪ್ರತಿ |
| 9 | : ಅಂಚೆ ರಶೀದಿಗಳು -3 |
| 10 | : ಜಾರಿಯಾಗದೇ ಹಿಂದಿರುಗಿ ಬಂದ ಅಂಚೆ ಲಕೋಟೆಗಳು -3 |
| 11 | : ದಿಃ 30.05.2022 ರಂದು ಜಿ ಎಸ್ ಪ್ರಸನ್ನ ಎನ್ನುವವರು ಕಳುಹಿಸಿದ ನೋಟೀಸ್ ನ ಪ್ರತಿ(ಸದರಿ ದಾಖಲೆ ಜೆರಾಕ್ಸ್ ಪ್ರತಿಯಾಗಿದ್ದು, ಅದೇ ರೀತಿ ತನಗೆ ಬಂದಿತ್ತು) |

12 : ದಿಃ08.06.2022 ರಂದು ಜಿ ಎಸ್ ಪ್ರಸನ್ನ ರವರ ವಕೀಲರಿಗೆ ಕಳುಹಿಸಿದ ಪ್ರತ್ಯುತ್ತರ ನೋಟೀಸ್ ನ ಕಛೇರಿ ಪ್ರತಿ

13 : ಅಂಚೆ ರಶೀದಿ

14 : ಅಂಚೆ ಸ್ವೀಕೃತಿ ಪತ್ರ

**ಮೇಲ್ಕಂಡ ದಾಖಲೆಗಳನ್ನು ನಿಶಾನೆ ಪಿಃ1 ರಿಂದ 21 ಎಂದು ಗುರುತಿಸಲಾಯಿತು.** ನಿಪಿಃ 8 ಮತ್ತು 9 ರ ಅಂಚೆ ಲಕೋಟೆಗಳನ್ನು ತೆರೆದ ನ್ಯಾಯಾಲಯದಲ್ಲಿ ಹೊಡೆದು ನೋಡಲಾಗಿ ಅವುಗಳಲ್ಲಿ ಇದ್ದ ನೋಟೀಸ್ ಗಳು ನಿಪಿಃ 4 ರ ಕಛೇರಿ ಪ್ರತಿಗೆ ತಾಳೆಯಾಗಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿಃ8(ಎ) ಮತ್ತು 9(ಎ) ಎಂದು ಗುರುತಿಸಲಾಯಿತು. ನಿಪಿಃ 15 ರಿಂದ 17 ರ ಅಂಚೆ ಲಕೋಟೆಗಳನ್ನು ತೆರೆದ ನ್ಯಾಯಾಲಯದಲ್ಲಿ ಹೊಡೆದು ನೋಡಲಾಗಿ ಅವುಗಳಲ್ಲಿ ಇದ್ದ ನೋಟೀಸ್ ಗಳು ನಿಪಿಃ 11 ರ ಕಛೇರಿ ಪ್ರತಿಗೆ ತಾಳೆಯಾಗಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿಃ15(ಎ), 16(ಎ) ಮತ್ತು 17(ಎ) ಎಂದು ಗುರುತಿಸಲಾಯಿತು.

ನಿಪಿ 3 ರ ಕ್ರಯದ ಕರಾರು ಪತ್ರವನ್ನು ಪ್ರತಿವಾದಿಯರು ನನಗೆ ಬರೆದುಕೊಟ್ಟಿದ್ದು, ನನಗೆ ಈಗ ನಿಪಿಃ3 ರ ದಾಖಲೆ ತೋರಿಸುತ್ತಿದ್ದು ಅದರಲ್ಲಿ ಅವರ ಸಹಿಗಳು ಇವೆ. ಸದರಿ ಸಹಿಯನ್ನು ನಿಪಿಃ3(ಎ) ಯಿಂದ (ಸಿ) ಎಂದು ಗುರುತಿಸಲಾಯಿತು. ನಿಪಿಃ 3 ಕ್ಕೆ ಸಾಕ್ಷಿದಾರರಾಗಿ ಸೋಮಶೇಖರ್ ಮತ್ತು ರಾಮಕೃಷ್ಣ ಎನ್ನುವವರು ಸಹಿ ಹಾಕಿದ್ದು ಈಗ ನಾನು ನಿಪಿಃ3 ರ ಮೇಲೆ ಇರುವ ಅವರ ಸಹಿಗಳನ್ನು ಗುರುತಿಸುತ್ತಿದ್ದೇನೆ. ಸದರಿ ಸಹಿಗಳನ್ನು ನಿಪಿಃ3(ಡಿ) ಮತ್ತು 3(ಇ) ಎಂದು ಗುರುತಿಸಲಾಯಿತು. ನಿಪಿಃ3 ಅನ್ನು ಮಹದೇವ ಎನ್ನುವ ಪತ್ರ ಬರಹಗಾರರು ಬಿಕಲಂ ಆಗಿ ಸಹಿ ಹಾಕಿದ್ದು, ನಾನು ಈಗ ನಿಪಿಃ3 ರ ಮೇಲೆ ಇರುವ ಅವರ ಸಹಿಯನ್ನು ನೋಡಿ ಗುರುತಿಸುತ್ತಿದ್ದೇನೆ. ಸದರಿ ಸಹಿಯನ್ನು ನಿಪಿಃ3(ಎಫ್) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗಾಗಿ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.